
# ಹಸುರು ಹಬ್ಬುವ ಫೈಕಸ್

**ಫೈಕಸ್‌ನ ಹಲವು ಆಲಂಕಾರಿಕ ಪ್ರಭೇದಗಳು ಮನೆಗೆ ಹಸುರು ತುಂಬುವ ಜೊತೆಗೆ ಮನಕ್ಕೆ ಹರ್ಷವನ್ನೂ ಹರಿಸುತ್ತವೆ.**

■ ಸೀಮಾ ಹೆಗಡೆ







ಕಾಡು, ಮೇಡು, ಕಡಲು; ಯಾವುದೇ ಪರಿಸರವಿರಲಿ, ಅಲ್ಲಿಯ ಜೈವಿಕ ವಾತಾವರಣವನ್ನು ಸುವ್ಯವಸ್ಥಿತವಾಗಿಡುವ ಒಂದು ಅನನ್ಯ ಜೀವಪ್ರಭೇದವಿರುತ್ತದೆ. ಬಾಗಿದ ಕಲ್ಲಿನ ಕಮಾನನ್ನು ಹಿಡಿದಿಡುವ 'ನೆತ್ತಿಗಲ್ಲಿ'ನಂತೆ ಆ ಒಂದು ಪ್ರಭೇದವಿಲ್ಲದಿದ್ದರೆ ಅಲ್ಲಿಯ ಪರಿಸರವೇ ಕುಸಿದುಬೀಳುತ್ತದೆ. ಇದನ್ನೇ 'ಕೀ ಸ್ಟೋನ್ ಪ್ರಭೇದ' ಎನ್ನಲಾಗುತ್ತದೆ.

ಉದಾಹರಣೆಗೆ, ಸಸ್ಯಾಹಾರಿಗಳ ಸಂಖ್ಯೆಯನ್ನು ಹದ್ದುಬಸ್ತಿನಲ್ಲಿಡುವ ಹುಲಿಗಳು, ಸಮುದ್ರದ ಜೀವರಾಶಿಯನ್ನು ಸಮದೂಗಿಸುವ ಶಾರ್ಕ್‌ಗಳು, ಕರಾವಳಿಯನ್ನು ಕಾಪಾಡುವ ಮ್ಯಾಂಗ್ರೋವ್‌ಗಳು ಇತ್ಯಾದಿ. ಸಸ್ಯಗಳಲ್ಲಿ ಪ್ರಮುಖವಾದದ್ದು 'ಫೈಕಸ್'. ನಮ್ಮ ಸುತ್ತಲೂ ಸದ್ದಿಲ್ಲದೆ ಜೀವವೈವಿಧ್ಯವನ್ನು ಸಲಹುತ್ತಿರುವ ಅತ್ತಿ, ಆಲ, ಅರಳಿ, ಗೋಳಿ, ಬಸರಿ ಮುಂತಾದವು. ಬೃಹದಾಕಾರವಾಗಿ ಹರಡಿಕೊಂಡಿರುವ ಫೈಕಸ್ ಪ್ರಭೇದದ ಒಂದು ಮರವಿದ್ದರೆ ಸುತ್ತಲ ಹತ್ತು ಮೈಲಿನ ಜೀವರಾಶಿ ಸಮೃದ್ಧವಾದಂತೆ. ಅಧ್ಯಯನವೊಂದರ ಪ್ರಕಾರ ಒಂದು ಫೈಕಸ್ ಮರ 1200 ಜಾತಿಯ ಜೀವಿಗಳಿಗೆ ಆವಾಸಸ್ಥಾನವಾಗಬಲ್ಲದಂತೆ, ಆಹಾರ ಮೂಲವಾಗಬಲ್ಲದಂತೆ.

ನಮ್ಮ ಸೌಭಾಗ್ಯ ಈ ಎಲ್ಲಾ ಫೈಕಸ್‌ಗಳನ್ನು ಬೋನ್ಸಾಯ್‌ಗಳಾಗಿ ಬೆಳೆಸಬಹುದಾಗಿದೆ. ಇವುಗಳ ಜೊತೆಗೆ ಕೆಲವನ್ನು ಒಳಾಂಗಣ ವಿನ್ಯಾಸಕ್ಕೆ ಬಳಸುವುದಿದೆ. ಹೊಟೇಲ್, ರೆಸ್ಟೋರೆಂಟ್, ಕಚೇರಿ, ವಿಮಾನ ನಿಲ್ದಾಣಗಳಲ್ಲಿ ಹಸುರು ಸೂಸುವ ಅಂತಹ ಆಲಂಕಾರಿಕ ಫೈಕಸ್‌ಗಳ ಪಟ್ಟಿ ಹೀಗಿದೆ.

**ಫೈಕಸ್ ಬೆಂಜಮಿನಾ:** ನೀರಿನ ಹನಿಯಂತೆ ಇಳಿಮುಖವಾದ ಹರವುಳ್ಳ, ಕಡುಹಸಿರಿನ ಚೂಪು ತುದಿಯ ಎಲೆಯುಳ್ಳ ಈ ಗಿಡವನ್ನು 'ವೀಪಿಂಗ್ ಫಿಗ್' ಎಂದೇ ಕರೆಯಲಾಗುತ್ತದೆ. ರೆಸ್ಟೋರೆಂಟ್‌ಗಳ ಬಾಗಿಲಲ್ಲಿ ಆಚೆಗೊಂದು ಈಚೆಗೊಂದರಂತೆ ಕೆಲವೆಡೆ ಕಾಂಡ ಹೆಣೆದುಕೊಂಡು, ಕೆಲವೆಡೆ ಬಾಲ್ ಆಕಾರಕ್ಕೆ ಟ್ರಿಮ್ ಮಾಡಿಕೊಂಡು ಸ್ಟೇಟ್‌ಮೆಂಟ್ ಲುಕ್ ಕೊಡುವ ಈ ಸಸ್ಯ ಕಣ್ಣು ತಪ್ಪಲು ಸಾಧ್ಯವೇ ಇಲ್ಲ.

**ಫೈಕಸ್ ಎಲಾಸ್ಟಿಕಾ:** ಈ ಸಸ್ಯ 'ರಬ್ಬರ್ ಗಿಡ' ಎಂದೇ ಹೆಸರುವಾಸಿ. ಕಂದು ಬಣ್ಣದ ಎಲೆಗಳುಳ್ಳ ಎಲಾಸ್ಟಿಕಾದ ಸಾಲಿಗೆ ತಿಳಿಹಸುರು, ತಿಳಿಗುಲಾಬಿ ಬಣ್ಣದ ಎಲೆಗಳ ಜಾತಿಗಳೂ ಈಚೆಗೆ ಸೇರ್ಪಡೆಯಾಗಿವೆ.

**ಫೈಕಸ್ ಲೈರಾಟಾ:** ವಯೊಲಿನ್ ವಾದ್ಯ ಹೋಲುವ ಎಲೆಗಳುಳ್ಳ ಈ ಸಸ್ಯ 'ಫಿಡಲ್ ಲೀಫ್ ಫಿಗ್' ಎಂದೇ ಫೇಮಸ್.

**ಫೈಕಸ್ ಟ್ರಯಾಂಗ್ಯುಲ್ಯಾರಿಸ್:** ತ್ರಿಕೋನಾಕಾರದ ಎಲೆಗಳುಳ್ಳ 'ಟ್ರಯಾಂಗ್ಯುಲಾರ್ ಫಿಗ್', ಅದರಲ್ಲೂ ಬಿಳಿ ಅಂಚಿನ ಎಲೆಗಳುಳ್ಳ 'ವೆರಿಗೇಟಾ' ತನ್ನ ವಿಭಿನ್ನ ಆಕಾರದ ಎಲೆಗಳಿಂದಾಗಿ ಸಸ್ಯಪ್ರೇಮಿಗಳ ಗಮನಸೆಳೆಯುತ್ತಿದೆ.

**ಫೈಕಸ್ ಪ್ಯುಮಿಲಾ/ರೆಪೆನ್ಸ್:** ಗೋಡೆಯನ್ನು ಆವರಿಸುವ ಪುಟ್ಟ ಹೃದಯಾಕಾರದ ಎಲೆಗಳುಳ್ಳ ನಿತ್ಯಹಸುರಿನ ಈ ಬಳ್ಳಿಗೆ 'ಕ್ರೀಪಿಂಗ್ ಫಿಗ್' ಎಂದೇ ಹೆಸರು. ಸಾಮಾನ್ಯವಾಗಿ ಓಂ, ಸ್ವಸ್ತಿಕ್, ಹೃದಯದ ವಿನ್ಯಾಸದಲ್ಲಿ ಗೋಡೆಗೆ ಹಬ್ಬಿಸಿರುವುದನ್ನು ನೋಡಿರಲು ಸಾಕು.

**ಫೈಕಸ್ ಜಿನ್‌ಸೆಂಗ್:** ಇತ್ತೀಚೆಗೆ ರೆಡಿಮೇಡ್ ಬೋನ್ಸಾಯ್‌ಗಳೆಂದು ನರ್ಸರಿಗಳಲ್ಲಿ ಮಾರಾಟವಾಗುತ್ತಿರುವ ಈ ಸಸ್ಯಗಳು ಜಿನ್‌ಸೆಂಗ್ ಬೇರಿನಂತೆ ದಪ್ಪದಾಗಿ ಉಬ್ಬಿರುವ ಕಾಂಡಗಳಿಂದಾಗಿ ಆಕರ್ಷಕ. ಸಾಮಾನ್ಯವಾಗಿ ಜಿನ್‌ಸೆಂಗ್ ಮೇಲೆ 'ಫೈಕಸ್ ಮೈಕ್ರೊಕಾರ್ಪಾ'ವನ್ನು ಕಸಿ ಕಟ್ಟಿರಲಾಗುತ್ತದೆ. 'ಮೈಕ್ರೊಕಾರ್ಪಾ' ಕೂಡ ಹೆಡ್ಜ್ ಸಸ್ಯವಾಗಿ ಬಳಕೆಯಲ್ಲಿದೆ.

ಫೈಕಸ್‌ಗಳು ಮೂಲತಃ ಹೊರಾಂಗಣ ಸಸ್ಯ ಜಾತಿಯಾಗಿರುವ ಕಾರಣ ಚೆನ್ನಾಗಿ ಬೇರೂರಲು ದೊಡ್ಡ ಹೂಕುಂಡ, ಹೆಚ್ಚು ಮಣ್ಣು, ಪೋಷಕಾಂಶ ಅಗತ್ಯ. ಮೇಲಿನ ಎಲ್ಲಾ ಫೈಕಸ್‌ಗಳು ಒಳಾಂಗಣಕ್ಕಾದರೂ ಏಳೆಂಟು ಗಂಟೆಯ ಬೆಳಕು ಬೇಕು. ಮಣ್ಣು ಒಣಗದಂತೆ, ತೀರಾ ಜವಳೂ ಆಗದಂತೆ ಹದವಾಗಿ ನೀರುಣಿಸಬೇಕು. ಒಳಾಂಗಣ ವಾತಾವರಣ ಹಿಡಿಸದಿದ್ದರೆ ಬೆಳವಣಿಗೆ ಸ್ತಬ್ಧವಾಗಿ ಎಲೆ ಉದುರುವ ಲಕ್ಷಣಗಳು ಗೋಚರಿಸಬಹುದು. ಒಮ್ಮೆ ಹೊಂದಿಕೊಂಡರೆ ಹಸಿರು ಹಬ್ಬವಂತೂ ಪಕ್ಕ. ■